## ಸಫಾಯಿ ಕರ್ಮಚಾರಿಗಳ ಸಂಖ್ಯೆ ಎಷ್ಟು?

ನಮ್ಮ ದೇಶದಲ್ಲಿ ಮಲದ ಗುಂಡಿ ಸ್ವಚ್ಛಪಡಿಸುವ ಕೆಲಸಗಾರರ ಸಂಖ್ಯೆ ಎಷ್ಟಿದೆ? ಎಲ್ಲಿಯೂ ನಿಖರವಾದ ಅಂಕಿಅಂಶಗಳು ಸಿಗುವುದಿಲ್ಲ. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ 3 ಮತ್ತು 4ನೇ ವರದಿಯ ಪ್ರಕಾರ 5 ಲಕ್ಷ 77 ಸಾವಿರದ 228 ಜನ ಇದ್ದಾರೆ. 2002–0–3ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ವರದಿಯಂತೆ 6 ಲಕ್ಷ 76 ಸಾವಿರದ 9 ಜನರಿದ್ದಾರೆ. 2011ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೇಶಾದ್ಯಂತ ನಡೆಸಿದ ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿಯ ಪ್ರಕಾರ 1 ಲಕ್ಷ 68 ಸಾವಿರದ 66 ಕುಟುಂಬಗಳು ಮಲದ ಗುಂಡಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಈ ಅಂಕಿಅಂಶಗಳು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಏಳುತ್ತದೆ. ಗುಜರಾತ್‌ನಲ್ಲಿ 2, ಚತ್ತೀಸ್‌ಗಢದಲ್ಲಿ 1 ಕುಟುಂಬವಷ್ಟೇ ಈ ಕೆಲಸದಲ್ಲಿ ತೊಡಗಿಸಿಕೊಂಡಿದೆ ಎಂದರೆ ನಂಬಲು ಸಾಧ್ಯವೇ? ಗೋವಾದಲ್ಲಂತೂ ಒಬ್ಬರೂ ಇಲ್ಲವಂತೆ! ಹಾಗಿದ್ದರೆ ಆ ರಾಜ್ಯಗಳಲ್ಲಿ ಮಲದ ಗುಂಡಿ ಮತ್ತು ಮ್ಯಾನ್‌ಹೋಲ್‌ಗಳು ಕಟ್ಟಿಕೊಳ್ಳುವುದೇ ಇಲ್ಲವೇ ಅಥವಾ ಇಡೀ ರಾಜ್ಯದಲ್ಲಿ ಕಟ್ಟಿಕೊಂಡಾಗ ಇದೇ 2 ಅಥವಾ 3 ಕುಟುಂಬಗಳವರು ಸರಿಪಡಿಸುತ್ತಾರೆಯೇ?

ಸಫಾಯಿ ಕರ್ಮಚಾರಿ ಆಂದೋಲನವು ಸುಮಾರು 12 ಲಕ್ಷ ಸಫಾಯಿ ಕರ್ಮಚಾರಿಗಳು ಇದ್ದಾರೆಂದು ಅಂದಾಜು ಮಾಡಿದೆ. ಸರ್ಕಾರ ಇದನ್ನು ಒಪ್ಪಲು ತಯಾರಿಲ್ಲ. 2017ರ ಆಗಸ್ಟ್ ಸಂಸತ್ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನೀಡಿದ ಉತ್ತರ: '13 ರಾಜ್ಯಗಳಲ್ಲಿ ಕೇವಲ 13,368 ಮಲದ ಗುಂಡಿ ಸ್ವಚ್ಛಪಡಿಸುವವರಿದ್ದಾರೆ'. ಗುಜರಾತ್, ಹರಿಯಾಣ, ಕೇರಳ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಇನ್ನುಳಿದ ಯಾವ ರಾಜ್ಯಗಳಲ್ಲಿಯೂ ಮಲದ ಗುಂಡಿ ಸ್ವಚ್ಛಪಡಿಸುವವರೇ ಇಲ್ಲ! ಹಾಗಿದ್ದರೆ ಅಲ್ಲಿ ಯಾರು, ಹೇಗೆ ಸ್ವಚ್ಛಪಡಿಸುತ್ತಾರೆ? ಅಲ್ಲಿ ಎಲ್ಲದಕ್ಕೆ ಯಂತ್ರಗಳಿವೆಯೇ? ಪ್ರಸ್ತುತ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ಕಾರ್ಪೋರೇಶನ್ 18 ರಾಜ್ಯಗಳ ಆಯ್ದ 170 ಜಿಲ್ಲೆಗಳಲ್ಲಿ ಸಮೀಕ್ಷೆ ಮಾಡಲಾರಂಭಿಸಿದೆ. ಈಗಾಗಲೇ 156 ಜಿಲ್ಲೆಗಳಲ್ಲಿ ಸಮೀಕ್ಷೆ ಪೂರ್ಣಗೊಂಡಿದ್ದು, 17,835 ಜನರನ್ನು ಮಲದ ಗುಂಡಿ ಸ್ವಚ್ಛಪಡಿಸುವವರು ಎಂದು ಗುರುತಿಸಲಾಗಿದೆ. ಕಳೆದ ಸಮೀಕ್ಷೆಯಲ್ಲಿ ಯಾರೂ ಇಲ್ಲ ಎಂದಿದ್ದ ಗುಜರಾತಿನ ನಾಲ್ಕು ಜಿಲ್ಲೆಗಳಲ್ಲಿ 108 ಜನರನ್ನು ಗುರುತಿಸಲಾಗಿದೆ. ಕರ್ನಾಟಕದ 6 ಜಿಲ್ಲೆಗಳಲ್ಲಿ ಇನ್ನೂ ಅಪೂರ್ಣಗೊಂಡ ಸಮೀಕ್ಷೆಯಲ್ಲಿ ಈ ವರೆಗೆ 1259 ಜನರನ್ನು ಗುರುತಿಸಲಾಗಿದೆ.

ಒಣ ಪಾಯಿಖಾನೆಗಳು ಎಷ್ಟಿವೆ ಎಂದು ನಿಖರ ಅಂಕಿಸಂಖ್ಯೆಗಳಿಲ್ಲ. 2011ರ ಹೌಸ್ ಹೋಲ್ಡಿಂಗ್ ಮತ್ತು ಹೌಸಿಂಗ್ ಡಾಟಾ ಪ್ರಕಾರ ಸುಮಾರು 26 ಲಕ್ಷ ಒಣ ಪಾಯಿಖಾನೆಗಳಿವೆ; ಅವುಗಳಲ್ಲಿ 13.29 ಲಕ್ಷ ನಗರಗಳಲ್ಲಿವೆ ಮತ್ತು 12.77 ಲಕ್ಷ ಗ್ರಾಮೀಣ ಭಾಗದಲ್ಲಿವೆ. ಇದೀಗ 'ಸ್ವಚ್ಛ ಭಾರತ್ ಮಿಶನ್' ಹೇಳುತ್ತಿದೆ, ಅವೆಲ್ಲವನ್ನು ಒಡೆದು ಹಾಕಿ, ನೀರು ಹಾಕುವ ಪಾಯಿಖಾನೆಗಳನ್ನಾಗಿ ಕಟ್ಟಲಾಗಿದೆ ಎಂದು. ಆದರೆ ಉತ್ತರ ಭಾರತದ ಬಹುತೇಕ ಹಳ್ಳಿಗಳಲ್ಲಿ ಇನ್ನೂ ಒಣ ಪಾಯಿಖಾನೆಗಳಿವೆ.

'ರೈಲ್ವೆ ನಿಲ್ದಾಣಗಳಲ್ಲಿ ಟ್ರಾಕುಗಳ ಮೇಲೆ ಬಿದ್ದ ಮಲವನ್ನು ಬಾಚಿ ಸ್ವಚ್ಛಪಡಿಸಲು ಯಂತ್ರಗಳಿವೆ, ಯಾರೂ ಕೈಯಿಂದ ಮಾಡುವುದಿಲ್ಲ ' ಎಂದು ರೈಲ್ವೆ ಇಲಾಖೆ ಹೇಳುತ್ತದೆ. ವಾಸ್ತವದಲ್ಲಿ ರೈಲ್ವೆಯಲ್ಲಿ 36 ಸಾವಿರಕ್ಕೂ ಹೆಚ್ಚು ಸಫಾಯಿ ಕರ್ಮಚಾರಿಗಳಿದ್ದಾರೆ. ಮಾರ್ಚ್ 2018ರ ಸಂಸತ್ ಅಧಿವೇಶನದಲ್ಲಿ ಈ ಕುರಿತು ಕೇಳಿದ ಪ್ರಶ್ನೆಗೆ '499 ಮುಖ್ಯ ನಿಲ್ದಾಣಗಳಲ್ಲಿ ಯಾಂತ್ರೀಕೃತ ಸ್ವಚ್ಛತಾ ವ್ಯವಸ್ಥೆ ಇದೆ. 97 ನಿಲ್ದಾಣಗಳಲ್ಲಿ ಯಾಂತ್ರೀಕೃತ ವ್ಯವಸ್ಥೆಯನ್ನು ಈ ವರ್ಷ ಮಾಡಲಾಗುವುದು' ಎಂದು ಇಲಾಖೆ ಉತ್ತರಿಸಿದೆ. ಒಟ್ಟು ಇರುವ ನಿಲ್ದಾಣಗಳು 7349, ಅಂದರೆ ಶೇ. 6.7ರಷ್ಟು ನಿಲ್ದಾಣಗಳಲ್ಲಿ ಯಂತ್ರಗಳನ್ನು ಬಳಸಲಾಗುತ್ತಿದೆ. ಶೇ.1.3ರಷ್ಟು ನಿಲ್ದಾಣಗಳಲ್ಲಿ ಯಂತ್ರಗಳನ್ನು ಬಳಸಲು ಯೋಜಿಸಲಾಗುತ್ತಿದೆ. ಇನ್ನುಳಿದ ಶೇ.91 ರಷ್ಟು ನಿಲ್ದಾಣಗಳಲ್ಲಿ ಸಫಾಯಿ ಕರ್ಮಚಾರಿಗಳೇ ಮಲ ಬಾಚುತ್ತಾರೆ ಎಂದು ರೈಲ್ವೆ ಇಲಾಖೆಯೇ ಒಪ್ಪಿಕೊಂಡಂತೆ ಆಯಿತಲ್ಲ.

---

ರಮಣಯ್ಯ ತಣ್ಣಗೆ ಪ್ರಶ್ನಿಸುತ್ತಾರೆ. ಅವರ ಪ್ರಶ್ನೆಗೆ ಏನೆಂದು ಉತ್ತರಿಸುವುದು?

ತಮಿಳುನಾಡಿನಿಂದ ಇಪ್ಪತ್ತು ವರ್ಷದ ಹಿಂದೆ ಬೆಂಗಳೂರಿಗೆ ಬಂದ ರಮಣಯ್ಯ ಆಗಿನಿಂದ ಇದೇ ಕೆಲಸ ಮಾಡುತ್ತಿದ್ದಾರೆ. ಒಮ್ಮೆ ಚೇಂಬರ್ ಮುಚ್ಚಳ ತೆರೆಯುವಾಗ ಸೊಂಟ ಉಳುಕಿದಂತಾಗಿದ್ದು, ಮತ್ತೆ ಅವರಿಗೆ ಬೆನ್ನು ನೇರ ಮಾಡಲು ಆಗಿಲ್ಲ. ಆದರೂ ಹೊಟ್ಟೆ ಪಾಡು ನಡೆಯಬೇಕಲ್ಲ ಎಂದು ಬೇರೆಯವರ ಜೊತೆಗೆ ಕೆಲಸಕ್ಕೆ ಹೋಗುತ್ತಾರೆ. ಮೊದಲಿನಂತೆ ಗುಂಡಿಗೆ ಇಳಿಯಲು ಆಗುವುದಿಲ್ಲ, ಕೆಳಗಿನಿಂದ ಅವರು ಬಾಲ್ದಿ ತುಂಬಿ ಕೊಟ್ಟಿದ್ದನ್ನು ಮೇಲೆ ನಿಂತು ತೆಗೆದುಕೊಳ್ಳುತ್ತಾರೆ. 'ನಮ್ಮ ಪಾಡು ನಮ್ಮ ಮಕ್ಕಳಿಗೆ ಬೇಡಪ್ಪ' ಎನ್ನುತ್ತಾರೆ. ಹಾಗೆಂದು ಹೆಚ್ಚು ಓದಿಸಲೂ ಸಾಧ್ಯವಾಗುತ್ತಿಲ್ಲ.

'ಇಸ್ಕೂಲು ಫ್ರೀ ಅಂತ ನೀವು ಹೇಳತೀರ, ನಿಜ. ಆದರೆ ಸಣ್ಣಪುಟ್ಟದಕ್ಕೆ ದುಡ್ಡ ಬೇಕೇ ಬೇಕಲ್ಲವಾ. ನೋಡಿ, ನನ್ನ ಮಗಳು ಅದೇನೋ ಕಾಸ್ಟು ಸರ್ಟಿಫಿಕೇಟು ಮಾಡಿಸಬೇಕು ಅಂತವಳೆ, ಫೋಟೋ ಹಿಡಿಸಿ ಕೊಡಬೇಕು. ಅದಕ್ಕೆ ಒಂದೈವತ್ತಾದ್ರೂ ಬೇಕಲ್ಲ. ನಿನ್ನೆಯಿಂದ ಕೇಳ್ತಾವಳೆ, ನನಗೆ ಅಷ್ಟೂ ಕೊಡಕ್ಕೆ ಆಗ್ಲಿಲ್ಲ' ಬಸವಳಿದ ದನಿಯಲ್ಲಿ ಹೇಳುತ್ತಾರೆ ವೆಂಗಡಾಸಲಂ. ಅವರ ಮಾತು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಅಣಕಿಸುವಂತಿದೆ.

### 'ಸ್ವಚ್ಛ ಭಾರತ ಮಿಶನ್' ಸಾಧನೆ

2014ಕ್ಕಿಂತ ಮೊದಲು ನಿರ್ಮಲ ಭಾರತ ಅಭಿಯಾನದಡಿಯಲ್ಲಿ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಶೌಚಾಲಯ ನಿರ್ಮಾಣ ಕೈಗೆತ್ತಿಕೊಳ್ಳಲಾಗಿತ್ತು. ಪ್ರಧಾನಿ ಮೋದಿಯವರ ಮಹತ್ವಾಕಾಂಕ್ಷಿ ಯೋಜನೆಯಾಗಿ ರೂಪುಗೊಂಡ 'ಸ್ವಚ್ಛ ಭಾರತ್ ಮಿಶನ್' ಅಡಿಯಲ್ಲಿ 2014ರಿಂದ 2018ರವರೆಗೆ ಗ್ರಾಮೀಣ ಭಾಗದಲ್ಲಿ 8,61,15,526 ವೈಯಕ್ತಿಕ ಶೌಚಾಲಯಗಳನ್ನು ಕಟ್ಟಲಾಗಿದೆ. 4,73,331 ಹಳ್ಳಿಗಳನ್ನು ಬಹಿರ್ದೆಸೆ ಮುಕ್ತ ಗ್ರಾಮಗಳೆಂದು ಮತ್ತು 472 ಜಿಲ್ಲೆಗಳನ್ನು ಬಹಿರ್ದೆಸೆ ಮುಕ್ತ ಜಿಲ್ಲೆಗಳೆಂದು ಸಾರಲಾಗಿದೆ. ಇದೇ ಅವಧಿಯಲ್ಲಿ ನಗರ ಭಾಗದಲ್ಲಿ 51,49,271 ವೈಯಕ್ತಿಕ ಶೌಚಾಲಯಗಳು ಮತ್ತು 4,06,163 ಸಮುದಾಯ ಶೌಚಾಲಯಗಳನ್ನು ಕಟ್ಟಲಾಗಿದೆ. 3,062 ನಗರಗಳನ್ನು ಬಹಿರ್ದೆಸೆ ಮುಕ್ತ ನಗರಗಳೆಂದು ಘೋಷಿಸಲಾಗಿದೆ. (ಅಂಕಿಸಂಖ್ಯೆ: ಸೆಪ್ಟೆಂಬರ್ 26. ಇದು ದಿನದಿನಕ್ಕೆ ಪರಿಷ್ಕರಣೆಯಾಗುತ್ತಿರುತ್ತದೆ).

ಈ ಸಾಧನೆ ಮೆಚ್ಚಬೇಕಾದ್ದೇ. ಆದರೆ ಇಷ್ಟೆಲ್ಲ ಶೌಚಾಲಯಗಳನ್ನು ಕಟ್ಟಿದ್ದೀವಲ್ಲ, ಇವು ತುಂಬಿ, ಕಟ್ಟಿಕೊಂಡ ನಂತರ ಅವನ್ನು ಹೇಗೆ ಸ್ವಚ್ಛಪಡಿಸುವುದು? 'ಸ್ವಚ್ಛ ಭಾರತ್ ಮಿಶನ್' ಬಳಿ ಇದಕ್ಕೆ ಏನು ಕಾರ್ಯಯೋಜನೆಯಿದೆ?

"ಮುನ್ಸಿಪಾಲ್ಟಿಗಳ ಬಳಿ ಇರುವ ಒಂದು, ಎರಡು ಸಕ್ಕಿಂಗ್ ಯಂತ್ರಗಳು ಗುಂಡಿಯ ಮೇಲಿನ ಕೊಚ್ಚೆಯನ್ನು ಹೀರಬಲ್ಲವು, ಕೆಳಗೆ ಗಟ್ಟಿಯಾಗಿ ಕಟ್ಟಿಕೊಂಡಿರುವುದನ್ನು ತೆಗೆಯಲು ಮತ್ತೆ ಈ ದಲಿತ ಕೆಲಸಗಾರರನ್ನೇ ಗುಂಡಿಗೆ ಇಳಿಸುತ್ತೀರಿ. ಲಕ್ಷಗಟ್ಟಲೆ ಕಕ್ಕಸು ಗುಂಡಿಗಳು ಎಂದರೆ ನೀವು ಇನ್ನಷ್ಟು ದಲಿತರನ್ನು ಗುಂಡಿಗೆ ಇಳಿಸಿ ಕೊಲ್ಲಲು ಆಹ್ವಾನಿಸುತ್ತಿದ್ದೀರಿ ಅಷ್ಟೆ" ಎನ್ನುವ ಬೇಜವಾಡ ವಿಲ್ಸನ್‌ರ ದನಿಯಲ್ಲಿ ಇಷ್ಟೆಲ್ಲ ವರ್ಷಗಳಿಂದ ಕಂಡುಂಡ ಒಡಲಾಳದ ನೋವು, ರೋಷವಿದೆ.

'ಸ್ವಚ್ಛ ಭಾರತ್' ಮಿಶನ್‌ಗೆ ನೀಡಿದ ಆಯವ್ಯಯವೇನೂ ಕಡಿಮೆಯಲ್ಲ. 2017–18ರಲ್ಲಿ ಪರಿಷ್ಕೃತ ಆಯವ್ಯಯದಂತೆ ₹19248.27 ಕೋಟಿ ಹಾಗೂ 2018–19ಕ್ಕೆ ಅಂದಾಜು ಆಯವ್ಯಯ ₹ 17843.10 ಕೋಟಿ. ಈ ಯೋಜನೆಯ ಜಾಹೀರಾತು ಹಾಗೂ ಪ್ರಚಾರಕ್ಕೆ ಮೂರು ವರ್ಷಗಳಲ್ಲಿ (2014–16ರವರೆಗೆ) ಖರ್ಚು ಮಾಡಿದ ಹಣ ₹ 530 ಕೋಟಿ.

1993ರ ನಂತರ ಅಂದರೆ ಸುಮಾರು 15 ವರ್ಷಗಳ ಅವಧಿಯಲ್ಲಿ ಶೌಚಾಲಯ ಮತ್ತು ಚರಂಡಿಗುಂಡಿ ಸ್ವಚ್ಛಪಡಿಸುವಾಗ ಸತ್ತವರಿಗೆ ನೀಡಿದ ಪರಿಹಾರ ಹಣ – ಅಂದಾಜು ₹ 25 ಕೋಟಿ.